ವಿಪಶ್ಯನ ವಾರ್ತೆ
VIPASSANA VARTE

ಕನ್ನಡ ಮಾಸಪತ್ರಿಕೆ, **10 ನವೆಂಬರ್ 2025** ಬೆಂಗಳೂರು, ಸಂಪುಟ 11, ಸಂಚಿಕೆ 07 ಪುಟಗಳು-4. **ಸಂಪಾದಕರು** : ಜಿ.ಟಿ.ಗೋವಿಂದಪ್ಪ
Kannada monthly, **10 November 2025**, Bengaluru, Vol. 11, Issue No.07 Pages-4, KARKAN2015/68727 **Editor**: G.T. Govindappa.

ಚಂದಾ: ವಾರ್ಷಿಕ ರೂ. 30, ಆಜೀವ : ರೂ. 500.
ಪ್ರಕಾಶನ: ಕರ್ನಾಟಕ ವಿಪಶ್ಯನ ಪ್ರಚಾರ ಸಮಿತಿ ಟ್ರಸ್ಟ್.

Subscription : Annual Rs. 30; Life : Rs. 500/-
Published by: Karnataka Vipassana Prachara Samiti Trust.

ಧಮ್ಮ ಪದಗಳು

ಅಸಂತಂ ಭಾವನಮಿಚ್ಛೆಯ್ಯ, ಪುರೇಕ್ಖಾರಂಚ ಭಿಕ್ಖುಸು, ಆವಾಸೇಸು ಚ ಇಸ್ಸಿರಯಂ, ಪೂಜಾಂ ಪರಕುಲೇಸು ಚ.	ಮೂರ್ಖನು ತನಗೆ ಸಲ್ಲದ ಕೀರ್ತಿಯನ್ನು, ಭಿಕ್ಷುಗಳ ಮಧ್ಯದಲ್ಲಿ ಹೆಚ್ಚಿನ ಗೌರವಾದರಗಳನ್ನು, ಭಿಕ್ಷುಗಳ ವಾಸಸ್ಥಾನಗಳ ಮೇಲೆ ಅಧಿಕಾರವನ್ನು ಮತ್ತು ಗೃಹಸ್ಥ ಜನರಲ್ಲಿ ಸತ್ಕಾರವನ್ನು ಬಯಸುತ್ತಾನೆ.

ಧಮ್ಮಪದ–73, ಮೂರ್ಖನ ವರ್ಗ

ಸ್ವ–ನಿರೀಕ್ಷಣೆ

ಆಚಾರ್ಯ ಶ್ರೀ ಎಸ್.ಎನ್. ಗೋಯಂಕ (1924–2013)

(‘ಜಾಗೇ ಅಂತರ್ಬೋಧ’ ಹಿಂದಿ ಪುಸ್ತಕದ ‘ಆತ್ಮ–ನಿರೀಕ್ಷಣ’ ಅಧ್ಯಾಯದ ಕನ್ನಡಾನುವಾದ).

ಮಳೆಗಾಲದ ದಿನಗಳಲ್ಲಿ ಭಗವಾನ್ ಬುದ್ಧರು ಕೋಸಲ ದೇಶದ ರಾಜಧಾನಿ ಶ್ರಾವಸ್ತಿಯಲ್ಲಿ ಅನಾಥಪಿಂಡಿಕನ ಜೇತವನ ವಿಹಾರದಲ್ಲಿ ವಾಸ ಮಾಡುತ್ತಿದ್ದರು. ಕೋಸಲ ರಾಜನಾದ ಪ್ರಸೇನಜಿತ್ ಮತ್ತು ರಾಣಿ ಮಲ್ಲಿಕಾ ಇಬ್ಬರೂ ಬುದ್ಧನ ಶ್ರದ್ಧಾವಂತ ಶಿಷ್ಯರಾಗಿದ್ದರು. ಇವರಿಬ್ಬರೂ ಸ್ವ–ಗಮನಿಸುವ ವಿಪಶ್ಯನ ಧ್ಯಾನ ಸಾಧನೆಯನ್ನು ಅಭ್ಯಾಸ ಮಾಡುತ್ತಿದ್ದರು.

ವ್ಯಕ್ತಿಯು ಯಾವಾಗ ತನ್ನನ್ನು ತಾನು ಗಮನಿಸುವುದನ್ನು ಅಭ್ಯಾಸ ಮಾಡುತ್ತಾನೋ ಆಗ ತನ್ನ ಬಗೆಗಿನ ಅನೇಕ ನಿಜಾಂಶಗಳು ಅವನ ಅರಿವಿಗೆ ಬರುತ್ತವೆ. ತನ್ನ ಸ್ವಂತ ಅನುಭವದ ಮಟ್ಟದಲ್ಲಿ ತನ್ನ ಬಗ್ಗೆ ಸಾಕಷ್ಟು ವಿಷಯಗಳನ್ನು ತಿಳಿದುಕೊಳ್ಳಲು ಪ್ರಾರಂಭಿಸುತ್ತಾನೆ. ಪ್ರಕೃತಿಯ ಬಗೆಗೂ ಹೆಚ್ಚಿನದನ್ನು ಅರ್ಥಮಾಡಿಕೊಳ್ಳಲಾರಂಭಿಸುತ್ತಾನೆ. ಆಗ ಪ್ರಮುಖವಾಗಿ ಜೀವ ಜಗತ್ತಿನ ಪ್ರಾಥಮಿಕ ಸತ್ಯವಾದ ‘ದುಃಖ’ ಅವನ ಅರಿವಿಗೆ ಬರುತ್ತದೆ. ಈ ಸತ್ಯವನ್ನು ಸಾಧಕನು ತನ್ನ ಆಂತರ್ಯದಲ್ಲಿಯೇ ನೋಡುವುದನ್ನು ಅಭ್ಯಸಿಸುತ್ತಾನೆ. ಸಾಮಾನ್ಯ ಸಾಧಕನು ಕೆಲವೊಮ್ಮೆ ನಿಜವಾಗಿಯೂ ಸಮತಾಭಾವದಿಂದ ಗಮನಿಸುತ್ತಾನೆ. ಆದರೆ ಬಹುತೇಕ ದುಃಖದಲ್ಲಿ ಹೊರಳಾಡುತ್ತಾನೆ. ಈ ಪ್ರಕಾರವಾಗಿ ಕೆಲವೊಮ್ಮೆ ಸಮತಾಭಾವದಿಂದ ಗಮನಿಸಿದರೆ, ಮತ್ತೆ ಕೆಲವೊಮ್ಮೆ ಬಾಧೆಪಡುತ್ತಾನೆ. ಯಾವಾಗ ಗಮನಿಸುತ್ತಾನೋ ಆಗ ಸತ್ಯದ ಅನುಭವವಾಗುತ್ತದೆ. ಯಾವಾಗ ಸುಖ ದುಃಖಗಳನ್ನು ಅನುಭವಿಸುತ್ತಾನೋ ಆಗ ಅಜ್ಞಾನದ ಮೋಹ–ಸಾಗರದಲ್ಲಿ ಮುಳುಗುತ್ತಾನೆ.

ಸಮ್ಯಕ್ ದರ್ಶನವಾಗುತ್ತಿದೆಯೆಂದರೆ ಸತ್ಯದ ಯಥಾಭೂತ ದರ್ಶನ, ಅನುಭವವಾಗುತ್ತಿದೆ ಎಂದರ್ಥ. ಆಗ ಸಾಧಕನ ಚಿಂತನ–ಮನನ, ಸಂಕಲ್ಪ–ವಿಕಲ್ಪಗಳೆಲ್ಲವೂ ‘ಸಮ್ಯಕ್’ ಆಗಲು ಪ್ರಾರಂಭವಾಗುತ್ತವೆ. ಸತ್ಯದ ಯಥಾವತ್ ದರ್ಶನ ಉಂಟಾಗಿ, ಯಥಾವತ್ ಚಿಂತನೆ ಉಂಟಾಗುತ್ತದೆ, ಸಂಕಲ್ಪ–ವಿಕಲ್ಪಗಳ ಕ್ಷೇತ್ರಗಳಲ್ಲಿನ ಭ್ರಾಂತಿಗಳು ನಾಶವಾಗುತ್ತವೆ. ಸಮ್ಯಕ್ ಸಂಕಲ್ಪ ಮತ್ತು ಸಮ್ಯಕ್ ದರ್ಶನದಿಂದ ಸಮ್ಮಕ್ ಜ್ಞಾನ ಉಂಟಾಗುತ್ತದೆ. ವಿಷಯ ಹೇಗಿರುವುದೋ, ಅದನ್ನು ಹಾಗೆಯೇ ಅರಿಯಲು ಪ್ರಾರಂಭಿಸುತ್ತಾನೆ. ಸಮ್ಯಕ್ ಸಂಕಲ್ಪ ಮತ್ತು ಸಮ್ಯಕ್ ದರ್ಶನ ಎಷ್ಟೆಷ್ಟು ಶಕ್ತಿಯುತವಾಗುವುವೋ, ಅಷ್ಟಷ್ಟು ಸಮ್ಯಕ್ ಜ್ಞಾನವೂ ಸಹ ವೃದ್ಧಿಯಾಗುತ್ತಾ ಹೋಗುತ್ತದೆ. ಸಮ್ಯಕ್ ಜ್ಞಾನ ಮತ್ತು ಸಮ್ಯಕ್ ದರ್ಶನದಿಂದ ಸತ್ಯವು ಆರ್ಯಸತ್ಯವಾಗುತ್ತದೆ. ತೋರಿಕೆಯ ಸತ್ಯದ ಮರೀಚಿಕೆಯ ಪರದೆ ಸರಿಯತೊಡಗುತ್ತದೆ. ಪ್ರಕಟವಾಗಿರುವ ಸತ್ಯವನ್ನು ಗಮನಿಸುತ್ತಾ ಗಮನಿಸುತ್ತಾ ಅದು ಸ್ಪಷ್ಟವಾಗುತ್ತಾ ಸ್ಪಷ್ಟವಾಗುತ್ತಾ, ಅದು ಪರಮ ಸತ್ಯವಾಗುತ್ತದೆ ಮತ್ತು ಕೊನೆಗೆ ಅದೇ ಆರ್ಯಸತ್ಯವಾಗುತ್ತದೆ. ಆರ್ಯಸತ್ಯದ ದ್ರಷ್ಟಾರನು ಅನಾರ್ಯನಿಂದ ಆರ್ಯನಾಗುತ್ತಾ ಹೋಗುತ್ತಾನೆ. ಸಮ್ಯಕ್ ಸಂಕಲ್ಪ, ಸಮ್ಯಕ್ ದರ್ಶನ, ಸಮ್ಯಕ್ ಜ್ಞಾನಗಳಿಂದ ಸಮ್ಯಕ್ ಮುಕ್ತಿಯ ಕಡೆಗೆ ಒಂದೊಂದೇ ಹೆಜ್ಜೆಯನ್ನು ಇಡುತ್ತಾ ಮುಂದುವರಿಯುತ್ತಾನೆ. ಸ್ವಾನುಭವದ ಮೂಲಕ ಸರಿಯಾದ ಯೋಚನೆ ಮತ್ತು ಸರಿಯಾದ ದರ್ಶನದಿಂದ ಅರಿತು, ಭ್ರಮೆ–ಭ್ರಾಂತಿಗಳಿಂದ ಬಿಡುಗಡೆಯಾಗುತ್ತಾ ಹೋಗುತ್ತಾನೆ.

ವಾಸ್ತವವಾಗಿ ದುಃಖವಿದೆ. ಜೀವನವು ದುಃಖಕರ, ರೋಗವು ದುಃಖಕರ, ವೃದ್ಧಾಪ್ಯವು ದುಃಖಕರ, ಅಪ್ರಿಯದೊಡಗಿನ ಸಂಯೋಗವು ದುಃಖಕರ, ಪ್ರಿಯವಾದುದರಿಂದ ಅಗಲುವಿಕೆ ದುಃಖಕರ, ಬಯಕೆಯು ಈಡೇರದಿರುವುದು ದುಃಖಕರ. ಸಮ್ಯಕ್ ಸಂಕಲ್ಪ ಮತ್ತು ಸಮ್ಯಕ್ ದರ್ಶನಗಳಿಂದ ಸಮ್ಯಕ್ ಜ್ಞಾನದೆಡೆಗೆ ಸಾಧಕನು ಮತ್ತಷ್ಟು ಮುಂದುವರಿದಾಗ ವಾಸ್ತವಿಕವಾಗಿ ದುಃಖ ಏನು ಎಂಬುದು ಅತ್ಯಂತ ಸೂಕ್ಷ್ಮ ಮಟ್ಟದಲ್ಲಿ ಸಂಕ್ಷಿಪ್ತವಾಗಿ ಸಾಧಕನಿಗೆ ಅರಿವಾಗುತ್ತದೆ. ತನ್ನ ಮೂರ್ಖತನದಿಂದ ಈ ಶರೀರ–ಸ್ಕಂಧ ಮತ್ತು ಚಿತ್ತ–ಸ್ಕಂಧಗಳನ್ನೇ ‘ನಾನು’ ಎಂದು ಪರಿಗಣಿಸಿದ್ದಷ್ಟೇ ಅಲ್ಲದೆ, ಅವುಗಳ ಜೊತೆ ತಾದಾತ್ಮಭಾವ ಹೊಂದಿದ್ದೇನೆ. ಆರೇ! ಮನಸ್ಸಿನ ಅತ್ಯಂತ ಆಳದಲ್ಲಿರುವ ನಿಜವಾದ ದುಃಖ ಎಂಬುದು ಇದೇ ಆಗಿದೆ. 'ನಾನು' ಎಂಬುದರ ಬಗ್ಗೆ ಎಷ್ಟು ಆಳವಾದ ಆಸಕ್ತಿ ಇರುವುದೋ, ಅಷ್ಟೇ ಆಳವಾದ ದುಃಖವಿರುತ್ತದೆ. ಈ ನಕಲಿ ‘ನಾನು’ವಿನ ಮೇಲೆ ಎಷ್ಟೊಂದು ಆಳವಾದ ಆಸಕ್ತಿ, ಗಾಢವಾದ ಸಂಬಂಧ. ಈ ‘ನಾನು’ ಎಂಬುದರ ಮೇಲೆ, ‘ನನ್ನದು’ ಎಂಬುದರ ಮೇಲೆ, ಆಹಂ ಎಂಬುದರ ಮೇಲೆ, ಎಷ್ಟಷ್ಟು ಆಸಕ್ತಿಯಿರುವುದೋ, ಅಷ್ಟಷ್ಟು ದುಃಖ ಉಂಟಾಗುತ್ತದೆ. ಆಸಕ್ತಿಯು ಎಷ್ಟು ಆಳವಾಗಿರುವುದೋ, ದುಃಖವು ಅಷ್ಟೇ ಗಹನವಾಗಿರುತ್ತದೆ.

ಆಸಕ್ತಿಯ ಮೂಲ ಯಾವುದೆಂದರೆ ಈ ಅವಾಸ್ತವಿಕ ‘ನಾನು’ ವಿನ ಮೇಲಿನ ಆಲಂಬನೆ ತನ್ನ ಮೇಲಿನ–ಆಸಕ್ತಿಯೇ ಪ್ರಥಮ ಆಸಕ್ತಿಯಾಗಿದೆ. ಇದೇ ಸಮಸ್ತ ಆಸಕ್ತಿಗಳಿಗೂ, ಜನನಿಯಾಗಿದೆ. ಸಮಸ್ತ ದುಃಖಗಳಿಗೂ ಆಧಾರವಾಗಿದೆ. ವ್ಯಕ್ತಿಗೆ ತಿಳುವಳಿಕೆ ಬಂದಾಗಿನಿಂದಲೂ ಈ ‘ನಾನು’ ಎಂಬುದರ ಮೂರ್ತಿಯನ್ನು ಕೆತ್ತಲು ಪ್ರಾರಂಭಿಸುತ್ತಾನೆ. ತನ್ನ ಬಗ್ಗೆ ಒಂದು ಚಿತ್ರಣವನ್ನು ರೂಪಿಸಿಕೊಳ್ಳುತ್ತಾನೆ. ಈ ಚಿತ್ರಣದ ಚಿತ್ರಕಾರ, ಶಿಲ್ಪಿ ಮತ್ತು ಸೃಷ್ಟಿಕರ್ತ ತಾನೇ ಆಗುತ್ತಾನೆ. ತಾನೇ, ತನ್ನ ಮೂರ್ತಿಯನ್ನು ಕೆತ್ತುತ್ತಾನೆ. ಚಿತ್ರಣವನ್ನು ಕಲ್ಪಿಸಿಕೊಳ್ಳುತ್ತಾನೆ ಸೃಷ್ಟಿಕರ್ತನಾಗುತ್ತಾನೆ. ಈ ‘ನಾನು’ ಎಂಬುದರ ಜನಕ ತಾನೇ ಆಗುತ್ತಾನೆ.

ವ್ಯಕ್ತಿಯು ಯಾವಾಗ ಬಹಳ ಪ್ರೀತಿಯಿಂದ ಹೆಚ್ಚು ಸುಂದರವಾಗಿ

ತನ್ನ ಮೂರ್ತಿಯನ್ನು ನಿರ್ಮಿಸುತ್ತಾನೋ ಅದನ್ನು ಚೆನ್ನಾಗಿ ಅಲಂಕರಿಸುತ್ತಾನೆ. ಸ್ವಯಂ ನಿರ್ಮಿಸಿಕೊಂಡ ಈ ಪ್ರತಿಮೆಯನ್ನು ತನ್ನ ಮನೋಮಂದಿರದಲ್ಲಿ ಪ್ರತಿಷ್ಠಾಪಿಸುತ್ತಾನೆ. ತನ್ನ ಎಲ್ಲ ಪ್ರೀತಿ–ವಾತ್ಸಲ್ಯಗಳನ್ನು ಅದರ ಮೇಲೆ ಸುರಿಯುತ್ತಾನೆ. ತನ್ನ ಈ ಮೂರ್ತಿಯನ್ನು ಬಹಳ ಪ್ರೀತಿಸತೊಡಗುತ್ತಾನೆ ಮತ್ತು ಅದರಿಂದ ಆಕರ್ಷಿತನಾಗುತ್ತಾನೆ. ಈ ಪ್ರತಿಮೆಯನ್ನು ಮತ್ತಷ್ಟು ಸುಂದರಗೊಳಿಸುವ ಕೆಲಸವು ಇಡೀ ಜೀವನ ಪರ್ಯಂತ ಮುಂದುವರಿಯುತ್ತದೆ. ಅಹಂ ಅನ್ನು ಪೋಷಿಸುತ್ತಾ ದಷ್ಟಪುಷ್ಟವನ್ನಾಗಿ ಮಾಡುವುದು ಜೀವನದುದ್ದಕ್ಕೂ ಮುಂದುವರಿಯುತ್ತದೆ. ಈ ಮೂರ್ತಿಯನ್ನು ಪ್ರೀತಿಯಿಂದ ಎಷ್ಟೆಷ್ಟು ಶಕ್ತಿಯುತವಾಗಿ ಮಾಡುತ್ತಾನೋ, ಈ ಮೂರ್ತಿಯ ಬಗ್ಗೆ ಅಷ್ಟೇ ಹೆಚ್ಚು ಆಸಕ್ತನಾಗುತ್ತಾ ಹೋಗುತ್ತಾನೆ.

ಅವನಿಗೆ ಈ ಪ್ರಪಂಚದಲ್ಲಿ ಈ ಮೂರ್ತಿಗಿಂತ ಹೆಚ್ಚು ಪ್ರಿಯವಾದುದು ಯಾವುದೂ ಇಲ್ಲವೆನಿಸುತ್ತದೆ. ತನ್ನ ಎಲ್ಲ ಪ್ರೀತಿಯನ್ನು ಈ ಮೂರ್ತಿಯ ಮೇಲೆ ಧಾರೆಯೆರೆಯುತ್ತಾನೆ. ತನ್ನನ್ನು ಬಿಟ್ಟು ಯಾವುದೂ ಹೆಚ್ಚು ಪ್ರಿಯವೆನಿಸುವುದಿಲ್ಲ. ಸಾಧಕನಿಗೆ ಈ ಸತ್ಯವು ಅರಿವಾಗಲಾರಂಭಿಸುತ್ತದೆ.

ಸತ್ಯಾನ್ವೇಷಕನು ಮತ್ತು ಸ್ವ–ನಿರೀಕ್ಷನು ಆದ ರಾಜ ಪ್ರಸೇನಜಿತನು ದಿನದ ಆಡಳಿತದ ಜವಾಬ್ದಾರಿಯನ್ನು ಸಮಾಪ್ತಗೊಳಿಸಿ ಸಂಜೆಯ ವಿಶ್ರಾಂತಿಗಾಗಿ ಅರಮನೆಯ ಮೇಲಂತಸ್ತಿನಲ್ಲಿರುವ ರಾಣಿನಿವಾಸಕ್ಕೆ ಬಂದನು. ಸತ್ಯದರ್ಶಿನಿಯಾದ ರಾಣಿ ಮಲ್ಲಿಕ ಮುಗುಳ್ನಗುತ್ತ ಅವನನ್ನು ಸ್ವಾಗತಿಸಿದಳು., "ಮಲ್ಲಿಕಾ, ಈ ಪ್ರಪಂಚದಲ್ಲಿ ನಿನ್ನನ್ನು ನೀನು ಪ್ರೀತಿಸುವುದಕ್ಕಿಂತ ಬೇರೆ ಯಾರನ್ನಾದರೂ ನೀನು ಪ್ರೀತಿಸುತ್ತೀಯಾ? ಅರ್ಥಾತ್ "ನೀನು ಸ್ವ ಕೇಂದ್ರಿತ ವ್ಯಕ್ತಿಯೇ? ಸ್ವಾರ್ಥಪರ ವ್ಯಕ್ತಿಯೇ?" ಎಂದು ಮಹಾರಾಜನು ಮಲ್ಲಿಕಾ ಅವಳನ್ನು ಪ್ರಶ್ನಿಸಿದನು.

ರಾಣಿಯು ಸ್ವದರ್ಶಿನಿ ಜೊತೆಗೆ ಸತ್ಯಭಾಷಿಣಿಯೂ ಆಗಿದ್ದಳು. ಅವಳು ಮುಗುಳ್ನಗುತ್ತ "ಇಲ್ಲ ಮಹಾರಾಜ! ನನಗೆ ನನಗಿಂತ ಹೆಚ್ಚು ಪ್ರಿಯರಾದವರು ಯಾರೂ ಇಲ್ಲ. ಹೌದು ನಾನು ನಿಜವಾಗಿಯೂ ಸ್ವ–ಕೇಂದ್ರಿತ ವ್ಯಕ್ತಿಯೇ ಆಗಿದ್ದೇನೆ. ನಾನು ಸ್ವಾರ್ಥಿಯೇ " ಎಂದು ಉತ್ತರಿಸಿದಳು. ಮತ್ತು ನಗುತ್ತ ತನ್ನ ಪತಿಯನ್ನು ಮರು ಪ್ರಶ್ನಿಸಿದಳು, "ಮಹಾರಾಜ! ನಿಮಗೆ ನಿಮಗಿಂತ ಹೆಚ್ಚು ಪ್ರಿಯರಾದವರು ಯಾರಾದರೂ ಇದ್ದಾರೆಯೇ?" ಅರ್ಥಾತ್, "ನೀವೂ ಸಹ ಸ್ವ ಕೇಂದ್ರಿತ ವ್ಯಕ್ತಿಯೇ? ಸ್ವಾರ್ಥಪರರೇ?"

ಈ ಸಂಭಾಷಣೆ ಜಗಳಕ್ಕೆ ತಿರುಗುವಂತಿತ್ತು. ಆದರೆ ರಾಜ ಪ್ರಸೇನಜಿತನೂ ರಾಣಿ ಮಲ್ಲಿಕಾಳಂತೆಯೇ ಸ್ವದರ್ಶಿ ಹಾಗೂ ಸತ್ಯವಂತನೂ ಆಗಿದ್ದರಿಂದ, ನಗುತ್ತ, "ಇಲ್ಲ ಮಲ್ಲಿಕಾ, ನನಗೆ ನನಗಿಂತ ಹೆಚ್ಚು ಪ್ರಿಯರಾದವರು ಯಾರೂ ಇಲ್ಲ. ನಾನೂ ಸಹ ಸ್ವ–ಕೇಂದ್ರಿತ ವ್ಯಕ್ತಿ ಮತ್ತು ಸ್ವಾರ್ಥಿಯಾಗಿದ್ದೇನೆ ಎಂದು ಉತ್ತರಿಸಿದನು.

ಈ ಸತ್ಯ ಸಂಭಾಷಣೆಯಿಂದ ಈ ಧರ್ಮ ವ್ಯಕ್ತಿಗಳಿಬ್ಬರಿಗೂ ಸಂತೋಷವಾಯಿತು.

ನಿಜವಾಗಿಯೂ ಯಾವ ವ್ಯಕ್ತಿಯೂ ತನಗಿಂತ ಹೆಚ್ಚಾಗಿ ಮತ್ಯಾರನ್ನೂ ಪ್ರೀತಿಸುವುದಿಲ್ಲ. ತನ್ನ ಬಗೆಗೆ ಬಹಳ ಗಾಢವಾದ ಪ್ರೀತಿಯಿರುತ್ತದೆ. ಆಳವಾದ ಆಸಕ್ತಿಯಿರುತ್ತದೆ. ಆದ್ದರಿಂದಲೇ ತಾನು ಸುರಕ್ಷಿತವಾಗಿರಬೇಕೆಂಬ ಚಿಂತೆ ಉತ್ಪತ್ತಿಯಾಗುತ್ತದೆ. ತನಗೆ ಏನಾದರೂ ತೊಂದರೆಯಾಗಬಹುದೆಂಬ ಭಯ ಉಂಟಾಗುತ್ತದೆ. ಪ್ರೀತಿ ಮತ್ತು ಆಸಕ್ತಿಯಿರುವೆಡೆ ತಾನು ಇಷ್ಟಪಡದ ಘಟನೆ ಸಂಭವಿಸುವ ಭಯ, ಅಸುರಕ್ಷತೆಯ ಆತಂಕವಿರುತ್ತದೆ. ವ್ಯಕ್ತಿಯು 'ತನ್ನತನ', ಮತ್ತು 'ತಾನು' ಅನಂತಕಾಲದವರೆಗೆ ಶಾಶ್ವತವಾಗಿರಬೇಕೆಂದು ಬಯಸುತ್ತಾನೆ. 'ನಾನು'ವಿಗೆ ಉಂಟಾಗುವ ಅನಿಷ್ಟದ ಭಯ, ಅಸುರಕ್ಷತೆಯ ಆತಂಕಗಳನ್ನು ಹೋಗಲಾಡಿಸಲು ಸಹಾಯ ಮಾಡುವ ಯಾವ ವ್ಯಕ್ತಿಯಾಗಲಿ, ಸನ್ನಿವೇಶವಾಗಲಿ, ವಸ್ತುವಾಗಲಿ ಅಥವಾ ಘಟನೆಯಾಗಲಿ ಅವುಗಳು ಪ್ರಿಯವಾಗುತ್ತವೆ. ಸಹಾಯಕವಲ್ಲದವುಗಳು ಅಪ್ರಿಯವಾಗುತ್ತವೆ. ಭಯ, ಆತಂಕಗಳನ್ನು ಹೋಗಲಾಡಿಸದೇ ಅವುಗಳನ್ನು ಹೆಚ್ಚಿಸುವ ಯಾವ ವ್ಯಕ್ತಿಯಾಗಲಿ, ಸನ್ನಿವೇಶವಾಗಲಿ, ವಸ್ತುವಾಗಲಿ ಅಥವ ಘಟನೆಯಾಗಲಿ ಅವುಗಳು ಅಪ್ರಿಯವಾಗುತ್ತವೆ.

ಈ 'ನಾನು'ವಿನ ಬಗ್ಗೆ, ಈ 'ನನ್ನದರ' ಬಗ್ಗೆ, ಬಹಳ ಪ್ರೀತಿ ಹರಿದಾಗ ಇದು ಯಾವಾಗಲೂ ವ್ಯಕ್ತಿಯನ್ನು ಸುಖಿಯನ್ನಾಗಿರಿಸಲು ಬಯಸುತ್ತದೆ. ಈ 'ನಾನು' ವನ್ನು ಸುಖಿ ಹಾಗೂ ಸುರಕ್ಷಿತನನ್ನಾಗಿರಿಸಲು ವಿವಿಧ ಉಪಾಯಗಳನ್ನು ರೂಪಿಸುತ್ತಾನೆ. ಇವುಗಳು ಭವಿಷ್ಯದಲ್ಲಿ ಸಾಕಾರವಾಗಲೆಂದು ಸುಂದರ ಕನಸುಗಳ ಹೊದಿಕೆಯನ್ನು ಹೆಣೆಯುತ್ತಾನೆ. ಈ ಕನಸಿನ ಹೊದಿಕೆಯುಲ್ಲಿ ಹಾಸು ಹೊಕ್ಕುಗಳು ಬಹಳ ಆಕರ್ಷಿತವಾಗಿರುತ್ತವೆ ಮತ್ತು ಅವುಗಳ ಬಗ್ಗೆ ಬಹಳ ಪ್ರೀತಿ ಮತ್ತು ಆಸಕ್ತಿಗಳು ಉಂಟಾಗುತ್ತವೆ. ಇದನ್ನು ನೇಯುವುದರಲ್ಲಿ ಸಹಾಯ ಮಾಡುವವರು ಯಾರೇ ಆಗಿರಲಿ, ಎಂತಹವರೇ ಆಗಿರಲಿ, ಅವರೆಲ್ಲರೂ ಬಹಳ ಪ್ರಿಯರೆನಿಸುತ್ತಾರೆ.

ಆದ್ದರಿಂದ ವ್ಯಕ್ತಿಗೆ ಪ್ರೀತಿಯಿರುವುದು ತನ್ನಿಂದಲೇ ಹೆಣೆಯಲ್ಪಟ್ಟ ಸ್ವಪ್ನಗಳ ಬಗ್ಗೆ, ಬಯಕೆಗಳ ಬಗ್ಗೆ, ತೃಷ್ಣಗಳ ಬಗ್ಗೆ ಮತ್ತು ಈ ಸ್ವಪ್ನ, ಈ ಬಯಕೆ. ಈ ತೃಷ್ಣೆಗಳು ಈ 'ನಾನು' ಎನ್ನುವುದನ್ನು ಸುರಕ್ಷಿತ ಮತ್ತು ಸುಖಿಯಾಗಿಸಲೆಂದೇ ಹೆಣೆಯಲ್ಪಟ್ಟಿವೆ. ಆದ್ದರಿಂದ ಮೂಲತಃ ಪ್ರೀತಿಯು ಇರುವುದು ತನ್ನ ಬಗ್ಗೆಯೇ, ಈ 'ನಾನು' ಎಂಬ ತಾನೇ ನಿರ್ಮಿಸಿರುವ ಮೂರ್ತಿಯ ಬಗ್ಗೆ,

ನಿಜವಾಗಿಯೂ ತನ್ನಿಂದಲೇ ನಿರ್ಮಿತವಾದ ಈ 'ನಾನು' ಎಂಬುದನ್ನು ಎಷ್ಟು ಗಾಢವಾಗಿ ಪ್ರೀತಿಸುತ್ತೇನೆ ಎಂಬುದನ್ನು ಸತ್ಯಾನ್ವೇಷಕನಾದ ಸಾಧಕನು ಅರಿಯುತ್ತಾನೆ. ಎಲ್ಲಿಯವರೆಗೆ ಈ 'ನಾನು' ವಿನ ಬಗ್ಗೆ ಇರುವ ಆಸಕ್ತಿಯಿಂದ ಯಾರು ಸಂಪೂರ್ಣವಾಗಿ ಬಿಡುಗಡೆ ಯಾಗುವುದಿಲ್ಲವೋ ಅಲ್ಲಿಯವರೆಗೆ 'ನಾನು' ಮತ್ತು 'ನಾನು'ಗಳಿಂದ ನಿರ್ಮಿತವಾದ ಸ್ವಪ್ನಗಳನ್ನೇ ಪ್ರೀತಿಸುತ್ತಾನೆ. 'ನಾನು' ಮತ್ತು 'ನನ್ನದು' ಗಳಿಂದ ಹೆಣೆದ ಸ್ವಪ್ನಗಳನ್ನು ಪ್ರೀತಿಸುವುದೇ ಪ್ರಾರ್ಥಮಿಕವಾಗಿರುತ್ತದೆ. ಪ್ರಮುಖವಾಗಿರುತ್ತದೆ. ಇದನ್ನು ಹೊರತು ಪಡಿಸಿ ಉಳಿದ ಎಲ್ಲ ಪ್ರೀತಿಗಳು ಅವನಿಗೆ ಗೌಣವಾಗಿರುತ್ತವೆ.

ಎಲ್ಲ ಪರಸ್ಪರ ಸಂಬಂಧಗಳು ಈ 'ನಾನು' ಮತ್ತು, 'ನಾನು' ವಿಗೆ ಸಂಬಂಧಿಸಿದ ಸ್ವಪ್ನಗಳ ಮೇಲೆಯೇ ಆಧಾರಿತವಾಗಿವೆ. ನಮ್ಮ ಸ್ವಪ್ನಗಳಿಗೆ ಯಾವುದೇ ಸಂಬಂಧವಿಲ್ಲದವರು, ನಮಗೆ ಪ್ರಿಯರೂ ಅಲ್ಲ, ಅಪ್ರಿಯರೂ ಅಲ್ಲ, ನಮ್ಮ ಸ್ವಪ್ನಗಳನ್ನು ಸಾಕಾರಗೊಳಿಸಲು ಸಹಾಯ ಮಾಡುವವರೆಲ್ಲರೂ ನಮಗೆ ಪ್ರಿಯರಾಗಿರುತ್ತಾರೆ. ಅವರು ಎಷ್ಟೆಷ್ಟು ಸಹಾಯಮಾಡುತ್ತಾರೆಯೋ ಅವರ ಮೇಲಿನ ಪ್ರೀತಿ ಅಷ್ಟಷ್ಟು ಅಧಿಕವಾಗಿರುತ್ತದೆ ಇವುಗಳನ್ನು ಅಡ್ಡಿಪಡಿಸುವವರೆಲ್ಲರೂ ಅಪ್ರಿಯರಾಗಿರುತ್ತಾರೆ. ಅವರು ಎಷ್ಟೆಷ್ಟು ಅಡ್ಡಪಡಿಸುತ್ತಾರೋ, ಅಷ್ಟಷ್ಟು ಅಪ್ರಿಯರಾಗಿರುತ್ತಾರೆ. ಅವರು ತಂದೆ–ತಾಯಿ, ಮಗ ಅಥವಾ ಮಗಳು, ಸಹೋದರ ಅಥವಾ ಸಹೋದರಿ, ಪತಿ ಅಥವಾ ಪತ್ನಿ, ಗುರು ಅಥವಾ ಶಿಷ್ಯ, ಅಕ್ಕಪಕ್ಕದವರು, ಚಿಕ್ಕವರು ಅಥವಾ ದೊಡ್ಡವರು, ದೂರದಲ್ಲಿರುವವರು ಅಥವಾ ಹತ್ತಿರದಲ್ಲಿರುವವರು ಹೀಗೆ ಯಾರೇ ಆಗಿರಬಹುದು ಯಾವ ವ್ಯತ್ಯಾಸವೂ ಆಗುವುದಿಲ್ಲ.

ಅಣ್ಣ ತಮ್ಮಂದಿಬ್ಬರಲ್ಲಿ ಪ್ರೀತಿ ಬೆಳೆಯಿತು. ಅನೇಕ ವರ್ಷಗಳವರೆಗೆ ಇದು ವೃದ್ಧಿಯಾಗುತ್ತಾ ಬೆಳೆಯುತ್ತಾ ಹೋಯಿತು. ಇವರಿಬ್ಬರಲ್ಲಿ ಪರಸ್ಪರ ಗಾಢ ಪ್ರೀತಿ ಇದೆ ಎಂದು ಜನ ತಿಳಿದುಕೊಂಡಿದ್ದರು. ಈ ಸಹೋದರರಿಬ್ಬರೂ ಹಾಗೆಯೇ ತಿಳಿದುಕೊಂಡಿದ್ದರು. ನಮ್ಮನ್ನು ನಾವು ಪ್ರೀತಿಸುತ್ತೇವೆ ಮತ್ತು ನಾವು ಕಲ್ಪಿಸಿಕೊಂಡ ಸ್ವಪ್ನಗಳನ್ನು ಪ್ರೀತಿಸುತ್ತೇವೆಯೇ ಹೊರತು ನಮ್ಮಿಬ್ಬರಲ್ಲಿ ಪರಸ್ಪರ ಪ್ರೀತಿಯಿಲ್ಲ ಎಂದು ಅವರು ತಿಳಿದುಕೊಂಡಿರಲಿಲ್ಲ. ಅವರಿಬ್ಬರ ಕನಸು ಒಂದೇ ಎಂದು ತಿಳಿದುಕೊಂಡಿದ್ದರು. ಅವರಿಬ್ಬರ ಕನಸು ಒಂದೇ ಆಗಿದ್ದರಿಂದ ಅವರಿಬ್ಬರ ನಡುವಿನ ಪ್ರೀತಿ ಗಾಢವಾಗುತ್ತಾ ಹೋಯಿತು. ಒಬ್ಬರ ಕನಸು ಸಾಕಾರವಾದರೆ ಇನ್ನೊಬ್ಬರ ಕನಸೂ ತನಗೆ ತಾನೇ ಸಾಕಾರವಾಗುತ್ತಿತ್ತು. ಇವರಿಬ್ಬರ ಸುಖ ಮತ್ತು ಸುರಕ್ಷೆಗಳ ಕನಸುಗಳು ಸಾಕಾರವಾಗುವಲ್ಲಿ ಪರಸ್ಪರ ಸಹಯೋಗ ಮತ್ತು ಸಹಕಾರಗಳು ಸಹಾಯವಾಗುತ್ತಿದ್ದವು. ಇವರಿಬ್ಬರ ಪರಸ್ಪರ ಪ್ರೀತಿ ಅನೇಕ ವರ್ಷಗಳು–ಐವತ್ತು ವರ್ಷಗಳವರೆಗೆ ಮುಂದುವರೆಯಿತು. ಆದರೆ ಇಷ್ಟು ಧೀರ್ಘ ಕಾಲದ ನಂತರ ಇದ್ದಕ್ಕಿದ್ದ ಹಾಗೆ ಇವರಿಬ್ಬರ ಕನಸು ಭಿನ್ನವಾಗತೊಡಗಿತು. ಇವರಿಬ್ಬರ ಸುಖ ಮತ್ತು ಸುರಕ್ಷೆಗಳು ಬೇರೆಬೇರೆಯಾಗತೊಡಗಿದವು. ಇವುಗಳು ಕೇವಲ ಭಿನ್ನವಾಗಿರದೇ ಪರಸ್ಪರ ವಿರೋಧಿಗಳಾದವು. ಒಬ್ಬನ ಕನಸು ಸಾಕಾರವಾದರೆ, ಇನ್ನೊಬ್ಬನ ಕನಸು ಸಾಕಾರವಾಗುವುದಕ್ಕೆ

ಅಡ್ಡಿಯಾಗುತ್ತಿತ್ತು. ಈಗ ನೋಡಿ, ಸಹೋದರರಿಬ್ಬರಿಗೂ ತಮ್ಮಲ್ಲಿ ಇದ್ದ ಪ್ರೀತಿಯ ಬಗ್ಗೆ ಯಾವ ಹೆಮ್ಮೆಯಿತ್ತೋ ಮತ್ತು ಯಾವುದರ ಬಗ್ಗೆ ಜನರಲ್ಲಿ ಚರ್ಚೆಯಾಗುತ್ತಿತ್ತೋ ಆ ಪ್ರೀತಿ ಎಲ್ಲಿ ಹೋಯಿತು? ಈಗ ಒಬ್ಬರು ಇನ್ನೊಬ್ಬರ ಕಾಲನ್ನು ಎಳೆಯುವಲ್ಲಿ ಮಗ್ನರಾದರು. ಪರಸ್ಪರ ಹೊಡೆದಾಡಿ ತಮ್ಮ ತಮ್ಮ ಮಾರ್ಗದಿಂದ ಇನ್ನೊಬ್ಬನನ್ನು ದೂರಮಾಡುವಲ್ಲಿ ನಿರತರಾದರು. ಸಹೋದರತ್ವ ಭಾವ ಮಾಯವಾಯಿತು. ನೋಡ ನೋಡುತ್ತಲೇ ಪ್ರೀತಿ ವೈರತ್ವಕ್ಕೆ ತಿರುಗಿತು.

ಇದು ಕೇವಲ ಸಹೋದರರ ನಡುವೆ ಮಾತ್ರವಲ್ಲ, ಪತಿ–ಪತ್ನಿ, ತಂದೆ ತಾಯಿ–ಮಕ್ಕಳು, ಗುರು–ಶಿಷ್ಯ, ಸ್ನೇಹಿತರ ನಡುವೆಯೂ ಆಗುತ್ತದೆ. ಸಾಧಕನು ತನ್ನ ಸಾಧನೆಯಲ್ಲಿ ಪಕ್ವವಾಗುತ್ತಾ ಹೋದಂತೆ ಈ ಸತ್ಯವನ್ನು ಸಮತಾ ಭಾವದಿಂದ ಸ್ವೀಕರಿಸುತ್ತಾನೆ. ಇಲ್ಲವಾದಲ್ಲಿ ತಳಮಳಗೊಂಡು ವ್ಯಾಕುಲನಾಗುತ್ತಾನೆ. ಕೇವಲ ತಾನು ಮಾತ್ರ ದುಃಖಿತನಾಗದೆ ಇತರರನ್ನೂ ದುಃಖಿತರನ್ನಾಗಿ ಮಾಡುತ್ತಾನೆ.

ರಾಜಾ ಪ್ರಸೇನಜಿತ ಮತ್ತು ರಾಣಿ ಮಲ್ಲಿಕಾ ಈ ಸತ್ಯವನ್ನು ಚೆನ್ನಾಗಿ ಅರಿತಿದ್ದರು. ಮಾರನೇ ದಿನ ಭಗವಾನರ ದರ್ಶನಕ್ಕಾಗಿ ಜೇತವನ ವಿಹಾರಕ್ಕೆ ಹೋದಾಗ ತಮ್ಮೊಳಗೆ ನಡೆದ ಸಂಭಾಷಣೆಯನ್ನು ಭಗವಾನರಿಗೆ ತಿಳಿಸಿದರು. ಭಗವಾನರು ಅವರ ಅಭಿಪ್ರಾಯವನ್ನು ಸರಿಯಾಗಿದೆಯೆಂದು ಬೆಂಬಲಿಸಿದರು. ನಿಜವಾಗಿಯೂ ಪ್ರತಿಯೊಬ್ಬರೂ ತಮನ್ನು ತಾವು ಬಹಳ ಪ್ರೀತಿಸುತ್ತಾರೆ. ತಾನು ಎನ್ನುವುದೇ ಎಲ್ಲರಿಗೂ ಪ್ರಿಯವಾಗಿರುತ್ತದೆ.

ನಾವೂ ಸಹ ಈ ಸತ್ಯವನ್ನು ಅರ್ಥಮಾಡಿಕೊಳ್ಳಬೇಕು. ನನಗೆ ಹೇಗೆ 'ನಾನು' ಎಂಬುದು ಪ್ರಿಯವಾಗಿರುತ್ತದೆಯೋ, ನನ್ನ ಕನಸುಗಳು ಪ್ರಿಯಕರವೋ, ಹಾಗೆಯೇ ಬೇರೆಯವರಿಗೂ ಸಹ ಅವರವರ 'ನಾನು' ಮತ್ತು ಅವರವರ ಕನಸುಗಳು ಪ್ರಿಯವಾಗಿರುತ್ತವೆ. ನನ್ನ 'ನಾನು' ವಿನ ವಿರುದ್ಧ ಯಾರಿಂದಾದರೂ ಏನಾದರೂ ಆದರೆ ಹೇಗೆ ನನಗೆ ಅಪ್ರಿಯವೆನಿಸುತ್ತದೋ, ಹಾಗೆಯೇ ಇತರರಿಗೂ ಅವರವರ 'ನಾನು' ಮತ್ತು ಅವರ ಕನಸುಗಳ ವಿರುದ್ಧ ಏನಾದರೂ ಮಾಡಿದರೆ ಅವರಿಗೆ ಅದು ಅಪ್ರಿಯವಾಗುತ್ತದೆ. ಆದ್ದರಿಂದ ಸಾಧಕನು ಎಲ್ಲರನ್ನು ತನ್ನಂತೆಯೇ ಎಂದು ತಿಳಿದು ಇತರರ 'ನಾನು' ಎಂಬುದಕ್ಕೆ ಯಾವ ಆಘಾತವನ್ನು ಮಾಡಬಾರದು. ಯಾರ ಕನಸುಗಳಿಗೂ ಧಕ್ಕೆ ಮಾಡುವುದು ಸರಿಯಲ್ಲ. ಯಾರನ್ನೂ ನೋಯಿಸಬಾರದು.

ಈ ತರಹದ ಭಾವನೆಗಳನ್ನು ವ್ಯಕ್ತಪಡಿಸುತ್ತಾ ಆ ಸಮಯದಲ್ಲಿ ಭಗವಾನರಿಂದ ಕೆಳಗಿನ ಉದಾನ ವಾಣಿ ಹೊರಹೊಮ್ಮಿತು;

ಸಬ್ಬಾ ದಿಸಾ ಅನುಪರಿಗಮ್ಮ ಚೇತಸಾ, ನೇವಜ್ಜಗಾ ಪಿಯತರಮತ್ತನಾ ಕ್ವಚಿ ॥

ಏವಂ ಪಿಯೋ ಪುಥು ಅತ್ತಾ ಪರೇಸಂ, ತಸ್ಮಾ ನ ಹಿಂಸೇ ಪರಮತ್ತಕಾಮೋ ॥

ನಿಮ್ಮ ಮನಸ್ಸನ್ನು ಎಲ್ಲಡೆ ಅಲೆದಾಡಲು ಬಿಡಿ.

ಎಲ್ಲ ರೀತಿಯಿಂದಲೂ ಬೇಕಾದರೆ ಯೋಚಿಸಿ ನೋಡಿ. ನಿಮಗೆ ನಿಮಗಿಂತ ಪ್ರಿಯವಾಗಿರುವವರು ಯಾರೂ ಇಲ್ಲವೆಂದು ಅರಿವಾಗುತ್ತದೆ. ನಿಮಗೆ ನಿಜವಾಗಿರುವುದೇ ಇತರರಿಗೂ ಸತ್ಯವಾಗಿರುತ್ತದೆ. ಬೇರೆಯವರಿಗೂ ಅವರಿಗಿಂತಲೂ ಬೇರೆ ಯಾರೂ ಪ್ರಿಯರೆನಿಸುವುದಿಲ್ಲ. ಆದ್ದರಿಂದ ಯಾರು ತಮ್ಮ ಒಳಿತನ್ನು ಬಯಸುವರೋ ಅವರು ಬೇರೆಯವರನ್ನು ಪೀಡಿಸಬಾರದು.

ಬನ್ನಿ, ಭಗವಾನರ ಈ ಉದಾನ ವಾಣಿಯನ್ನು ಸ್ವೀಕರಿಸೋಣ. ಯಾರಿಗೂ ತೊಂದರೆಯನ್ನು ನೀಡದಿರೋಣ! ಯಾರಿಗೂ ತೊಂದರೆಯನ್ನು ನೀಡದಿಸೋಣ! ಯಾರಿಗೂ ತೊಂದರೆಯನ್ನು ನೀಡದಿರೋಣ! ಇದರಲ್ಲಿಯೇ ನಮ್ಮ ನಿಜವಾದ ಕಲ್ಯಾಣವಿದೆ!

*** ಬರೀ ನೋಡುವುದರ ಹೊರತು ಬೇರೆ ಏನೂ ಇಲ್ಲ.**

ಈಗ ಮುಂಬಯಿ ಇರುವ ಜಾಗದ ಹತ್ತಿರ ಒಬ್ಬ ಬಹಳ ಸಂತ ವ್ಯಕ್ತಿ ವಾಸವಾಗಿದ್ದರು. ಅವರನ್ನು ಭೇಟಿ ಮಾಡಿದವರೆಲ್ಲರೂ ಅವರ ಮನಸ್ಸಿನ ಪರಿಶುದ್ಧತೆಯನ್ನು ಕಂಡು ಗೌರವಿಸುತ್ತಿದ್ದರು ಮತ್ತು ಇವರು ಮುಕ್ತಿ ಹೊಂದಿದ್ದಾರೆಂದು ಅನೇಕರು ಪ್ರತಿಪಾದಿಸುತ್ತಿದ್ದರು. ಇಂತಹ ದೊಡ್ಡ ಪದಗಳಲ್ಲಿ ತಮ್ಮನ್ನು ವರ್ಣಿಸುವುದನ್ನು ಕೇಳಿ ಈ ವ್ಯಕ್ತಿಯು "ಬಹುಶಃ ನಾನು ನಿಜವಾಗಿಯೂ ಸಂಪೂರ್ಣ ಮುಕ್ತಿ ಹೊಂದಿರಬೇಕು" ಎಂದು ಆಶ್ಚರ್ಯಪಟ್ಟರು. ಆದರೆ ಅವರು ಪ್ರಾಮಾಣಿಕರಾಗಿದ್ದುದರಿಂದ ತಮ್ಮನ್ನು ಎಚ್ಚರಿಕೆಯಿಂದ ಪರೀಕ್ಷಿಸಿ ತಮ್ಮ ಮನಸ್ಸಿನಲ್ಲಿ ಇನ್ನೂ ಕಲ್ಮಶಗಳು ಇರುವುದನ್ನು ಕಂಡುಕೊಂಡರು. ಎಲ್ಲಿಯವರೆಗೆ ಕಶ್ಮಲಗಳು ಇರುತ್ತವೆಯೋ ಅಲ್ಲಿಯವರೆಗೆ ತಾನು ಸಂತನಲ್ಲವೆಂದು ನಿರ್ಧರಿಸಿಕೊಂಡರು. ಆದ್ದರಿಂದ ತಮ್ಮನ್ನು ಗೌರವಿಸಲು ಬಂದವರನ್ನು ಕುರಿತು ಅವರು "ಸಂಪೂರ್ಣವಾಗಿ ಮುಕ್ತರಾದವರೆಂದು ಗೌರವಿಸಲ್ಪಡುವವರು ಈ ಪ್ರಪಂಚದಲ್ಲಿ ಈಗ ಯಾರಾದರೂ ಇದ್ದಾರೆಯೇ?" ಎಂದು ಕೇಳಿದರು.

"ಹೌದು ಸ್ವಾಮಿ, ಸಾವತ್ತಿ ಪಟ್ಟಣದಲ್ಲಿ ವಾಸಿಸುವ ಬುದ್ಧರೆಂದು ಕರೆಯಲ್ಪಡುವ ಗೌತಮ ಭಿಕ್ಷುವಿದ್ದಾರೆ. ಅವರು ಸಂಪೂರ್ಣವಾಗಿ ಮುಕ್ತಿ ಹೊಂದಿದ್ದಾರೆಂದು ತಿಳಿಯಲಾಗಿದೆ. ಅಲ್ಲದೆ ಎಲ್ಲರೂ ಮುಕ್ತಿಯನ್ನು ಸಾಧಿಸಬಲ್ಲಂತಹ ವಿದ್ಯೆಯನ್ನೂ ಅವರು ಬೋಧಿಸುತ್ತಾರೆ" ಎಂದು ಅವರು ಉತ್ತರಿಸಿದರು.

"ನಾನು ಅವರ ಬಳಿಗೆ ಹೋಗಲೇಬೇಕು. ಅವರಿಂದ ನಾನು ಸಂಪೂರ್ಣವಾಗಿ ಮುಕ್ತಿ ಹೊಂದುವ ಮಾರ್ಗವನ್ನು ಕಲಿಯಬೇಕು" ಎಂದು ಆ ಸಂನ್ಯಾಸಿಯು ನಿರ್ಣಯಿಸಿದರು, ಆದ್ದರಿಂದ ಅವರು ಮುಂಬಯಿಯಿಂದ ಕಾಲುನಡಿಗೆಯಲ್ಲಿಯೇ ಹೊರಟು ಕೊನೆಗೆ ಭಾರತದ ಈಗಿನ ಉತ್ತರ ಪ್ರದೇಶದಲ್ಲಿರುವ ಸಾವತ್ತಿಗೆ ಬಂದರು. ಆನಂತರ ಅವರು ಬುದ್ಧರ ಧ್ಯಾನ ಕೇಂದ್ರಕ್ಕೆ ಹೋಗಿ ಅವರನ್ನು ಎಲ್ಲಿ ಕಾಣಬಹುದೆಂದು ಕೇಳಿದರು.

ಭಿಕ್ಷುಗಳಲ್ಲಿ ಒಬ್ಬರು "ಅವರು ಪಟ್ಟಣದಲ್ಲಿ ತಮ್ಮ ಊಟಕ್ಕಾಗಿ ಭಿಕ್ಷೆ ಬೇಡಲು ಹೋಗಿದ್ದಾರೆ. ಇಲ್ಲೇ ಕಾದಿದ್ದು ಪ್ರಯಾಣದ ಆಯಾಸದಿಂದ ವಿಶ್ರಮಿಸಿಕೊಳ್ಳಿ, ಅವರು ಬೇಗ ಹಿಂದಿರುಗುತ್ತಾರೆ" ಎಂದರು.

"ಓ ಇಲ್ಲ, ನಾನು ಕಾಯಲಾರೆ. ಕಾಯಲು ನನಗೆ ಸಮಯವಿಲ್ಲ! ಯಾವ ಕಡೆ ಹೋಗಿದ್ದಾರೆಂದು ನನಗೆ ತೋರಿಸಿ. ನಾನು ಹೋಗಿ ಭೇಟಿಯಾಗುವೆನು".

"ಸರಿ, ಹಾಗಾದರೆ ಅವರು ಹೋದ ದಾರಿ ಅದೇ, ನೀವು ಇಷ್ಟಪಟ್ಟರೆ, ಹೋಗಿ ಅವರನ್ನು ಕಾಣಲು ಪ್ರಯತ್ನಿಸಬಹುದು.".

ಒಂದು ಕ್ಷಣವನ್ನೂ ವ್ಯಯಮಾಡದೆ ಆ ಸಂನ್ಯಾಸಿಯು ಅಲ್ಲಿಂದ ಹೊರಟು ಆ ಪಟ್ಟಣದ ಮಧ್ಯಭಾಗಕ್ಕೆ ಬಂದರು, ಅಲ್ಲಿ ಮನೆಯಿಂದ ಮನೆಗೆ ಆಹಾರಕ್ಕಾಗಿ ಭಿಕ್ಷೆ ಬೇಡುತ್ತಿದ್ದ ಒಬ್ಬ ಭಿಕ್ಷುವನ್ನು ಕಂಡರು. ಈ ಮನುಷ್ಯನ ಸುತ್ತಲೂ ಇದ್ದ ಅದ್ಭುತವಾದ ಶಾಂತಿ ಮತ್ತು ಸಾಮರಸ್ಯದ ವಾತಾವರಣವು ಆ ಸಂನ್ಯಾಸಿಗೆ ಇವರೇ ಬುದ್ಧರಿರಬಹುದೆಂಬ ನಂಬಿಕೆ ಯುಂಟುಮಾಡಿತು. ಅಲ್ಲಿಯೇ ಹೋಗುತ್ತಿದ್ದ ದಾರಿಹೋಕ ನೊಬ್ಬನನ್ನು ಕೇಳಿ ಆತನೇ ಬುದ್ಧರೆಂದು ತಿಳಿದರು.

ರಸ್ತೆಯ ಮಧ್ಯದಲ್ಲಿಯೇ ಸಂನ್ಯಾಸಿಯು ಬುದ್ಧರ ಬಳಿಗೆ ಬಂದು ನಮಸ್ಕಾರ ಮಾಡಿ ಆತನ ಪಾದಗಳನ್ನು ಹಿಡಿದು "ಸ್ವಾಮಿ, ನೀವು ಪೂರ್ಣವಾಗಿ ಮುಕ್ತರಾಗಿದ್ದೀರೆಂದೂ, ಮುಕ್ತಿಗೆ ಮಾರ್ಗವನ್ನು ತೋರಿಸುವಿರೆಂದೂ ನನಗೆ ತಿಳಿದಿದೆ. ದಯವಿಟ್ಟು ಆ ವಿದ್ಯೆಯನ್ನು ನನಗೆ ಬೋಧಿಸಿರಿ" ಎಂದರು.

"ಹೌದು, ನಾನು ಆ ವಿದ್ಯೆಯನ್ನು ಬೋಧಿಸುತ್ತೇನೆ. ಅದನ್ನು ನಿನಗೂ ಬೋಧಿಸಬಲ್ಲೆ. ಆದರೆ ಇದು ಸರಿಯಾದ ಸಮಯ ಅಥವಾ ಸ್ಥಳ ಅಲ್ಲ ನೀನು ಹೋಗಿ ಧ್ಯಾನಕೇಂದ್ರದ ಬಳಿ ಕಾದಿರು ನಾನು ಬೇಗ ಹಿಂದಿರುಗಿ ನಿನಗೆ ಆ ವಿದ್ಯೆಯನ್ನು ಬೋಧಿಸುತ್ತೇನೆ" ಎಂದು ಬುದ್ಧರು ಹೇಳಿದರು.

"ಓಹ್! ಇಲ್ಲ ಸ್ವಾಮಿ ನಾನು ಕಾಯಲಾರೆ"

" ಏನು ಅರ್ಧ ಗಂಟೆಯವರೆಗೂ ಕಾಯಲಾರೆಯಾ?"

"ಇಲ್ಲ ಸ್ವಾಮಿ, ನಾನು ಕಾಯಲಾರೆ. ಯಾರಿಗೆ ಗೊತ್ತು! ಇನ್ನು ಅರ್ಧ ಗಂಟೆಯೊಳಗಾಗಿ ನಾನು ಸಾಯಬಹುದು ಅಥವಾ ಅರ್ಧ ಗಂಟೆಯೊಳಗೆ ನೀವು ಸಾಯಬಹುದು. ಇನ್ನು ಅರ್ಧ ಗಂಟೆಯೊಳಗಾಗಿ ನಾನು ನಿಮ್ಮಲ್ಲಿ ಇಟ್ಟಿರುವ ಶ್ರದ್ಧೆ, ನಂಬಿಕೆಗಳು ಹೊರಟುಹೋಗಬಹುದು. ಆಗ ನಾನು ಈ ವಿದ್ಯೆಯನ್ನು ಕಲಿಯಲು ಸಾಧ್ಯವಾಗದಿರಬಹುದು. ಈಗಲೇ ಸರಿಯಾದ ಸಮಯ. ಈಗಲೇ ನೀವು ನನಗೆ ಕಲಿಸಿ" ಎಂದರು. ಬುದ್ಧರು ಅವನನ್ನು ಅಂತರ್ದೃಷ್ಟಿಯಿಂದ ನೋಡಿ, ಹೌದು ಇವನ ಬಳಿ ಬಹಳ ಸ್ವಲ್ಪ ಸಮಯ ಮಾತ್ರ ಇದೆ. ಇವನು ಇನ್ನು ಕೇವಲ ಕೆಲವು ನಿಮಿಷಗಳಲ್ಲಿ ಸಾಯುವನು. ಅವನಿಗೆ ಈಗಲೇ ಇಲ್ಲಿಯೇ ಧರ್ಮವನ್ನು

RNI. No. : KARKAN/2015/68727. Postal Regn. No.: RNP/KA/BGS/2253/2023-25
Published On 10th & Posted On 20th of November Posted At : Bengaluru PSO, B'luru 26. Price(Annual)Rs.30.

ಉಪದೇಶ ಮಾಡಬೇಕು" ಎಂದುಕೊಂಡರು "ಆದರೆ ರಸ್ತೆಯ ಮಧ್ಯೆ ನಿಂತುಕೊಂಡು ಧರ್ಮವನ್ನು ಉಪದೇಶ ಮಾಡುವುದು ಹೇಗೆ?" ಅವರು ಕೇವಲ ಕೆಲವೇ ಮಾತುಗಳನ್ನಾಡಿದರು; ಆ ಮಾತುಗಳಲ್ಲಿ ಸಂಪೂರ್ಣ ಬೋಧೆಯೇ ತುಂಬಿತ್ತು. "ನಿಮ್ಮ ನೋಟದಲ್ಲಿ ಬರೀ ನೋಡುವಿಕೆ ಇರಬೇಕು; ನೀವು ಕೇಳುವುದರಲ್ಲಿ ಬರೀ ಕೇಳುವುದು ಮಾತ್ರ ಇರಬೇಕು; ನಿಮ್ಮ ಘ್ರಾಣ, ರಸಾಸ್ವಾದ ಮತ್ತು ಸ್ಪರ್ಶ ಕ್ರಿಯೆಗಳಲ್ಲಿ ಬರೀ ಮೂಸುವಿಕೆ, ರುಚಿನೋಡುವಿಕೆ, ಸ್ಪರ್ಶ ಮಾಡುವಿಕೆ ಮಾತ್ರ ಇರಬೇಕು ಮತ್ತು ಬರೀ ಅರಿವು ಮಾತ್ರವಲ್ಲದೆ ಬೇರೇನೂ ಇರಬಾರದು. ಆರು ಜ್ಞಾನೇಂದ್ರಿಯಗಳ ಮೂಲಕ ವಿಷಯದ ಸಂಪರ್ಕವಾದಾಗ ಬೆಲೆ ಕಟ್ಟುವುದಾಗಲೀ, ರೂಢಿಗತ ಗ್ರಹಿಕೆಯಾಗಲೀ ಇರಬಾರದು. ಯಾವುದೇ ಅನುಭವವನ್ನು ಒಳ್ಳೆಯದು ಅಥವಾ ಕೆಟ್ಟದ್ದು ಎಂಬುದಾಗಿ ಗ್ರಹಿಸುತ್ತಾ ಹೋದರೆ, ನಾವು ನಮ್ಮ ಹಳೆಯ ಕುರುಡು ಪ್ರತಿಕ್ರಿಯೆಗಳಿಂದಾಗಿ ಪ್ರಪಂಚವನ್ನು ವಿಕೃತವಾಗಿ ನೋಡುತ್ತೇವೆ. ಮನಸ್ಸನ್ನು ಎಲ್ಲಾ ರೂಢಿಗತ ಅಭ್ಯಾಸಗಳಿಂದ ಮುಕ್ತಗೊಳಿಸ ಬೇಕಾದರೆ ನಾವು ನಮ್ಮ ಹಳೆಯ ಪ್ರತಿಕ್ರಿಯೆಗಳ ಆಧಾರದ ಮೇಲೆ ಬೆಲೆಕಟ್ಟುವುದನ್ನು ನಿಲ್ಲಿಸಲು, ಪ್ರತಿಕ್ರಿಯೆ ಮಾಡದೆ ಅರಿವಿನಿಂದ ಇರಲು ಕಲಿಯಬೇಕು'." ಎಂದು ಬೋಧಿಸಿದರು.

ಸಂನ್ಯಾಸಿಯ ಮನಸ್ಸು ಪರಿಪಕ್ವವಾಗಿತ್ತು. ಆದ್ದರಿಂದ ಮಾರ್ಗದರ್ಶನದ ಈ ಕೆಲವೇ ಮಾತುಗಳ ಉಪದೇಶವು ಅವರಿಗೆ ಸಾಕಾಯಿತು. ಅಲ್ಲಿ, ರಸ್ತೆಯ ಪಕ್ಕದಲ್ಲಿಯೇ ಅವರು ಕುಳಿತುಕೊಂಡು ತನ್ನ ಧ್ಯಾನವನ್ನು ಅಂತರಂಗದ ನೈಜತೆಯ ಮೇಲೆ ಏಕಾಗ್ರ ಮಾಡಿದರು. ಬೆಲೆಕಟ್ಟುವುದು ಇಲ್ಲ. ಅವರು ಸುಮ್ಮನೆ ತನ್ನೊಳಗೆ ನಡೆಯುತ್ತಿರುವ ಬದಲಾವಣೆಯ ಕಾರ್ಯವಿಧಾನವನ್ನು ಗಮನಿಸಿದರು. ಜೀವನದಲ್ಲಿ ಅವರಿಗೆ ಉಳಿದಿದ್ದ ಕೆಲವು ನಿಮಿಷಗಳಲ್ಲಿಯೇ ಅವರು ಅಂತಿಮ ಗುರಿ ತಲುಪಿ ಮುಕ್ತರಾದರು.

ಭವತು ಸಬ್ಬ ಮಂಗಳಂ– ಸಕಲ ಜೀವಿಗಳಿಗೂ ಮಂಗಳವಾಗಲಿ.

******

ಧಮ್ಮ ಪಫುಲ್ಲಾ, ಬೆಂಗಳೂರು

10 ದಿನದ ಶಿಬಿರಗಳು 2025 : ಫೆಬ್ರವರಿ 21 ರಿಂದ ಮಾರ್ಚ್ 4, ಮಾರ್ಚ್ 7 ರಿಂದ 18, ಮಾರ್ಚ್ 20 ರಿಂದ 28 ಸತಿಪಟ್ಠಾನ ಶಿಬಿರ, ಹಳೆಯ ಸಾಧಕರಿಗೆ ಮಾತ್ರ, ಏಪ್ರಿಲ್ 2 ರಿಂದ 13, ಏಪ್ರಿಲ್ 23 ರಿಂದ ಮೇ 4, ಮೇ 7 ರಿಂದ 15, ಮೇ 19 ರಿಂದ 30, ಜೂನ್ 4 ರಿಂದ 15, ಜೂನ್ 18 ರಿಂದ 29, ಜುಲೈ 2 ರಿಂದ 13, ಜುಲೈ 16 ರಿಂದ 27, ಜುಲೈ 30 ರಿಂದ ಆಗಸ್ಟ್ 10, ಆಗಸ್ಟ್ 13 ರಿಂದ 24, ಆಗಸ್ಟ್ 28 ರಿಂದ ಸೆಪ್ಟೆಂಬರ್ 8, ಸೆಪ್ಟೆಂಬರ್ 11ರಿಂದ 19, ಸೆಪ್ಟೆಂಬರ್ 24 ರಿಂದ ಅಕ್ಟೋಬರ್ 5, ಅಕ್ಟೋಬರ್ 15 ರಿಂದ 26, ಅಕ್ಟೋಬರ್ 29 ರಿಂದ ನವೆಂಬರ್ 9, 12 ರಿಂದ 23, 26 ರಿಂದ 7 ಡಿಸೆಂಬರ್ 10 ರಿಂದ 21,

ವಿಳಾಸ : ಧಮ್ಮ ಪಫುಲ್ಲ, ಆಲೂರು, ದಾಸನಪುರ ಹೋಬಳಿ, ಬೆಂಗಳೂರು. ರಾಷ್ಟ್ರೀಯ ಹೆದ್ದಾರಿ–4ರಲ್ಲಿ, ಹಿಮಾಲಯ ಡ್ರಗ್ ಕಂಪನಿಯ ಎದುರಿನ ಮಾಕಳಿ ಕ್ರಾಸ್‌ಗೆ ಬಂದರೆ ಆಟೋರಿಕ್ಷಾ ಸಿಗುತ್ತವೆ. ಬೆಂಗಳೂರು ಸಿಟಿ ಬಸ್ ನಿಲ್ದಾಣದಿಂದ (ಮೆಜೆಸ್ಟಿಕ್)ನಗರ ಸಾರಿಗೆ ಬಸ್ ಸಂಖ್ಯೆ: 256,258,258ಸಿ. ಸಂಪರ್ಕ ಸಂಖ್ಯೆಗಳು: 99725 88377, 63615 70725, 99725 88377, 63605 87970 **ಇ–ಮೇಲ್** : info @ paphulla. dhamma. org;website; www. vridhamma. org.

ಧಮ್ಮ ನಗರಿ ದಾವಣಗೆರೆ.

ಹತ್ತು ದಿನದ ಶಿಬಿರಗಳು –2025: ಮಾರ್ಚ್ 5 ರಿಂದ 16, ಏಪ್ರಿಲ್ 2 ರಿಂದ 13, ಏಪ್ರಿಲ್ 23 ರಿಂದ ಮೇ 4, ಮೇ 14 ರಿಂದ 25, ಜೂನ್ 4 ರಿಂದ 15, ಜೂನ್ 25 ರಿಂದ ಜುಲೈ 6, 16 ರಿಂದ 27, ಆಗಸ್ಟ್ 6 ರಿಂದ 17, ಸೆಪ್ಟೆಂಬರ್ 3–14, ಅಕ್ಟೋಬರ್ 6 ರಿಂದ 17, ನವೆಂಬರ್ 5 ರಿಂದ 16, ನವೆಂಬರ್ 26ರಿಂದ ಡಿಸೆಂಬರ್ 7, ಡಿಸೆಂಬರ್ 20 ರಿಂದ 31.

ಹಳೆಯ ಸಾಧಕರಿಗೆ ಮಾತ್ರ.

ಧಮ್ಮ ಸೇವಕರ ಕಾರ್ಯಾಗಾರ: ಅಕ್ಟೋಬರ್ 24 ರಿಂದ 26. ಮೂರು ದಿನದ ಶಿಬಿರ ಡಿಸೆಂಬರ್ 11 ರಿಂದ 14.

ವೆಬ್‌ಸೈಟ್ : https://www. dhamma. org/en/schedules/ schnagari

ಗೂಗಲ್ ಮ್ಯಾಪ್ : https://maps.app.goo.gl/CZoHPK WSeeUNSJKZ6

Contact Numbers : 90087 33008, 94485 88789, 87226 05694

ವಿಳಾಸ : ಶಂಕರನಹಳ್ಳಿ ರಸ್ತೆ, ಕೊಂಡಜ್ಜಿ ಬುಳ್ಳಾಪುರ, ಹರಿಹರ ತಾಲ್ಲೂಕು.

ಧಮ್ಮ ನದಿ, ವಿಪಶ್ಯನ ಧ್ಯಾನಕೇಂದ್ರ ಉಡುಪಿ ಜಿಲ್ಲೆ

ಆಗಸ್ಟ್ 6 ರಿಂದ 17, ಸೆಪ್ಟೆಂಬರ್ 3 ರಿಂದ 14, ಅಕ್ಟೋಬರ್ 10 ರಿಂದ 21, ನವೆಂಬರ್ 12 ರಿಂದ 23, ಡಿಸೆಂಬರ್ 10 ರಿಂದ 21. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: 9449773942, 9880173542, 8792173942.

ಧಮ್ಮವನ, ನಾಡಪ್ಪನಹಳ್ಳಿ – 571 617, ಮೈಸೂರು ಜಿಲ್ಲೆ.

ಜೂನ್ 18–29, ಜುಲೈ 9–17 (ಎಸ್‌ಟಿಪಿ) ಜುಲೈ 23ರಿಂದ ಆಗಸ್ಟ್ 31, ಆಗಸ್ಟ್20–31, ಸೆಪ್ಟೆಂಬರ್ 19–30, ಅಕ್ಟೋಬರ್ 15–26, ನವೆಂಬರ್ 18–29, ಡಿಸೆಂಬರ್ 17–28.

ನಿರಂತರಾಗಿ 2 ಮತ್ತು ಮೂರು ದಿನದ ಶಿಬಿರಗಳನ್ನು ಆಯೋಜಿಸ ಲಾಗುತ್ತಿದೆ. ಆನ್‌ಲೈನ್‌ನಲ್ಲಿ ನೋಂದಣಿ ಮಾಡಿಕೊಳ್ಳಲು: www.dhamma. org/schedules/schvana.

ಹೆಚ್ಚಿನ ಮಾಹಿತಿಗೆ : 88805 19658

ಧಮ್ಮ ಸುಖಾಲಯ, ಬೆಂಗಳೂರು

10 ದಿನದ ಶಿಬಿರಗಳು–2025:

ಸೆಪ್ಟೆಂಬರ್ 3 ರಿಂದ 14, ಸೆಪ್ಟೆಂಬರ್ 24 ರಿಂದ ಅಕ್ಟೋಬರ್5 : ನಿರಂತರವಾಗಿ ಒಂದು ದಿನದ ಶಿಬಿರಗಳು ನಡೆಯುತ್ತವೆ.

ವಿಳಾಸ : ಅರೆಹಳ್ಳಿ, ಹೊಸಕೋಟೆ ತಾಲೂಕು, ಬೆಂಗಳೂರು. website : sukhalaya.dhamma.org

ಫೋನ್ : 099004–52939

ವಂತಿಗೆ : ವಾರ್ಷಿಕ: ರೂ.30, ಆಜೀವ: ರೂ.500. ವಂತಿಗೆ ಸಂದಾಯ ಮಾಡಬೇಕಾದ ಬ್ಯಾಂಕ್ ಖಾತೆ :3194101004234; IFSC code:CNRB0003194; ಕೆನರಾ ಬ್ಯಾಂಕ್, ನಾಗರಬಾವಿ, ಬೆಂಗಳೂರು. ಖಾತೆದಾರರು:ಕರ್ನಾಟಕ ವಿಪಶ್ಯನ ಪ್ರಚಾರ ಸಮಿತಿ. ಹಣ ಸಂದಾಯದ ವಿವರ ಮತ್ತು ಪತ್ರಿಕೆ ಕಳುಹಿಸಬೇಕಾದ ಅಂಚೆ ವಿಳಾಸವನ್ನು ಶ್ರೀಮತಿ ಪುಷ್ಪ .ಎಸ್., ಮೊ.ಸಂ:7337734934 ಗೆ ಎಸ್.ಎಮ್.ಎಸ್.ಮಾಡಿರಿ.

ಮುದ್ರಕರು: ಬಿ.ಪ್ರದೀಪ ಕುಮಾರ, **ಪ್ರಕಾಶಕರು:** ಶ್ರೀಮತಿ ಆರ್. ಚಂದ್ರಮತಿ ಕರ್ನಾಟಕ ವಿಪಶ್ಯನ ಪ್ರಚಾರ ಸಮಿತಿ ಟ್ರಸ್ಟ್ ಪರವಾಗಿ.
ಮುದ್ರಣ: ಐರಣಿ ಆಫ್‌ಸೆಟ್ ಪ್ರಿಂಟರ್ಸ್, 4ನೇ ತಿರುವು, ಕೆ.ಹೆಚ್.ಬಿ.ಕಾಲೋನಿ,ದಾವಣಗೆರೆ–2.**ಪ್ರಕಾಶನ:**ಕರ್ನಾಟಕ ವಿಪಶ್ಯನ ಪ್ರಚಾರ ಸಮಿತಿ ಟ್ರಸ್ಟ್, # 7/1, 3ನೇ ಅಡ್ಡರಸ್ತೆ, ಎನ್.ಆರ್.ಕಾಲೋನಿ, ಮಹಿಳಾ ಮಂಡಳಿ ಶಾಲೆ ಎದುರು, ಬೆಂಗಳೂರು 560 004. **ಗೌರವ ಸಂಪಾದಕರು: ಜಿ.ಟಿ. ಗೋವಿಂದಪ್ಪ**

Printed by B.Pradeep Kumar, **Published by** Smt. R. Chandramathi on be half of Karnataka Vipassana Prachara Samithi Trust and **Printed at**: Airani Offset Printers, 4th Cross, K.H.B.Colony, Davangere-2 and **Published at** Karnataka Vipassana Prachara Samithi Trust, #93, 30th Cross, Banashankari 2nd Stage, Bengaluru - 70. **Editor: G.T. Govindappa,**

ಇಂದ:
ಕರ್ನಾಟಕ ವಿಪಶ್ಯನ ಪ್ರಚಾರ ಸಮಿತಿ ಟ್ರಸ್ಟ್
7/1, 3ನೇ ಅಡ್ಡರಸ್ತೆ, ಎನ್.ಆರ್.ಕಾಲೋನಿ,
ಮಹಿಳಾ ಮಂಡಳಿ ಶಾಲೆ ಎದುರು, ಬೆಂಗಳೂರು 560 004.

ಗೆ,